ಒಂದು ವರ್ಷದಿಂದ ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಅಳವಡಿಸಲಾದ ಟ್ರಾನ್ಸ್‌ಫಾರ್ಮರ್

16 (102) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಒಂದು ವರ್ಷದಲ್ಲಿ ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಅಳವಡಿಸಿರುವ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಎಷ್ಟು ಮತ್ತು ಎಲ್ಲೆಲ್ಲಿ ಅಳವಡಿಸಲಾಗಿದೆ; (ವಿವರಗಳನ್ನು ನೀಡುವುದು)

ಆ) ಈ ಎಲ್ಲಾ ಟ್ರಾನ್ಸ್‌ಫಾರ್ಮರ್‌ಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿವೆಯೇ;

ಇ) ಕಳೆದ ಒಂದು ವರ್ಷದಲ್ಲಿ ಹಾಳಾಗಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿಗೊಳಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಎಷ್ಟು ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿಗೊಳಿಸಲಾಗಿದೆ ಮತ್ತು ದುರಸ್ತಿಗೊಳಿಸಲು ತೆಗೆದುಕೊಂಡ ಸಮಯವೆಷ್ಟು ಹಾಗೂ ಅವುಗಳ ದುರಸ್ತಿಗೆ ವೆಚ್ಚವಾದ ಮೊತ್ತವೆಷ್ಟು; (ವಿವರಗಳನ್ನು ನೀಡುವುದು)?

ಕು॥ ಶೋಭಾ ಕರಂದ್ಲಾಜೆ (ಇಂಧನ ಸಚಿವರು):

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಲ್ಲಿ ಒಟ್ಟು 25 ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಕೆಳಕಂಡ ಸ್ಥಳಗಳಲ್ಲಿ ಅಳವಡಿಸಲಾಗಿರುತ್ತದೆ.

ಕ್ರ ಸಂ.	ಶಾಖೆಯ ಹೆಸರು	ಗ್ರಾಮದ ಹೆಸರು	ಟ್ರಾನ್ಸ್‌ಫಾರ್ಮರ್‌ನ ಸಾಮರ್ಥ್ಯ (ಕೆವಿಎಗಳಲ್ಲಿ
1	ಕಮಠಾಣ	ಚಟ್ನಳ್ಳಿ	2X63
2		ಬರಿದಾಬಾದ	1X63
3			1X25
4		ಕಮಠಾಣ	2X100
5	ಆಣದೂರ	ಕಪಲಾಪೂರ	2X63
6		ನೇಲವಾಡ	1X63

ಕ್ರ ಸಂ.	ಶಾಖೆಯ ಹೆಸರು	ಗ್ರಾಮದ ಹೆಸರು	ಟ್ರಾನ್ಸ್‌ಫಾರ್ಮರ್‌ನ ಸಾಮರ್ಥ್ಯ (ಕೆವಿಎಗಳಲ್ಲಿ
7		ಕೊಲಾರ	1X25
8			1X63
9	ಚಿಮಕೊಡ	ಅಸ್ಪೂರ	1X63
10		ಚಿಮಕೊಡ	1X63
11	ಮನ್ನಳ್ಳಿ	ಘೋಡಂಪಳ್ಳಿ	1X63
12		ನಾಗೂರ	1X25
13		ಎಕತಾಪೂರ	1X63
14		ಬುಧೆರಾ	1X63
15		ಮನ್ನಳ್ಳಿ	1X63
16		ಚಿಂತಲಗೆರಾ	1X63
17	ಡಿ–2	ಹಬಸಿಕೊಟೆ	1X100
18	ಡಿ–3	ಅಮಲಾಪೂರ	1X100
19		ಚಿಟ್ಟಾ	1X100
20	ಜನವಾಡಾ	ಅಲಿಯಂಬರ	1X25
21		ಮರಕಲ್	1X25
22	ಬಗದಲ	ತಡಪಳ್ಳಿ	1X25

ಆ) ಹೌದು.

ಇ) ಹೌದು.

ಈ) ಈ ವರ್ಷದಲ್ಲಿ ಈವರೆಗೆ ಒಟ್ಟು 409 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿಗೊಳಿಸಲಾಗಿದೆ. ವಿಫಲಗೊಂಡ ಎಲ್ಲಾ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು 15 ದಿವಸಗಳಲ್ಲಿ ದುರಸ್ತಿಗೊಳಿಸಲಾಗಿರುತ್ತದೆ. ಇವುಗಳ ದುರಸ್ತಿಗಾಗಿ ಒಟ್ಟು 59.15 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.